# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 67(ಹಳೆಯ ಸಂಖ್ಯೆ-19), ಸಂಜಯನಗರ. ಬೆಂಗಳೂರು.

ಸಂಖ್ಯೆ: ಸ.ಅ/ವಾ-67(ಹಳೆಯ ಸಂಖ್ಯೆ-19)/ಪಿ.ಆರ್/ . /2022-23 ದಿನಾಂಕ:-03-12-2022

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಿಷಯ:-ಮುಖ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/2020-21 ದಿನಾಂಕ: 21-09-2020. ರವರ ಆದೇಶದಂತೆ ದಿನಾಂಕ:-03-12-2022 ರಂದು ವಾರ್ಡ್ ನಂ: 67 (ಹಳೆಯ ಸಂಖ್ಯೆ-19) ಸಂಜಯನಗರ ಸೆಂಟ್ರಲ್ ಎಕ್ಸೈಜ್ ಲೇಔಟ್‌ನಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

::ಸಭೆಗೆ ಹಾಜರಾಗಿದ್ದವರ ವಿವರಗಳು::

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ | ಷರಾ |
|---|---|---|---|
| 1. | ಶ್ರೀಮತಿ. ಜ್ಯೋತಿ.ಜಿ ಚೌಳೂಲ್ಕರ್ ಸ.ಕಾ.ನಿ (ಘ.ತ್ಯಾ.ನಿ) ಪುಲಿಕೇಶಿ ನಗರ ವಿಭಾಗ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು | |
| 2. | ಶ್ರೀ. ನವನಾಥ್ | ಸದಸ್ಯ ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರು ವಾರ್ಡ್ ನಂ: 67(ಹಳೆಯ ಸಂಖ್ಯೆ-19) | |
| 3. | ಶ್ರೀ. ಸಲ್ಮಾನ್ | ಹಿರಿಯ ಆರೋಗ್ಯ ಪರಿವೀಕ್ಷಕರು | |
| 4. | ಶ್ರೀ.ಗಣೇಶ್ | ಕಿರಿಯ ಆರೋಗ್ಯ ಪರಿವೀಕ್ಷಕರು. | |
| 5. | ಶ್ರೀ. ಕೊಟ್ರೇಶ್ | ಸಂಚಾರಿ ಪೊಲೀಸ್ ಠಾಣೆ, ಆರ್.ಟಿ ನಗರ. | |
| 6. | ಶ್ರೀ. ರಮೇಶ್ | ಎ.ಎಸ್.ಐ ಸಂಜಯನಗರ ಪೊಲೀಸ್ ಠಾಣೆ | |
| 7. | ಶ್ರೀ. ಮಂಜುನಾಥ್ | ಬಿ.ಡಬ್ಲ್ಯೂ.ಎಸ್.ಎಸ್.ಬಿ | |
| 8. | ಬೀದಿ ದೀಪ ನಿರ್ವಾಹಕರು | Street light Incharge, B B M P. | |
| 9. | ಶ್ರೀ. ವಿಜ್ಞಾನಗೌಡ, ಆರ್.ಎ.ಹುದ್ದಾರ್ ಮತ್ತು ಇತರರು | ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು | |

ವಾರ್ಡ್ ಕಾರ್ಯದರ್ಶಿಗಳಾದ ಶ್ರೀ.ನವನಾಥ್, ಸಹಾಯಕ ಅಭಿಯಂತರರು ರವರು ಸಭೆಗೆ ಹಾಜರಾದ ಅಧ್ಯಕ್ಷರು, ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀಮತಿ ಜ್ಯೋತಿ.ಜಿ ಚೋಳೂಲ್ಕರ್ ರವರಿಗೆ ಮತ್ತು ಸಭೆಯಲ್ಲಿ ಸೇರಿದ ಸಾರ್ವಜನಿಕರಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

**ಘನತ್ಯಾಜ್ಯ ನಿರ್ವಹಣೆ:-**

1. ವಾರ್ಡ್‌ನ ಸಂಜಯನಗರ ಪೊಲೀಸ್ ಠಾಣೆಯ ಎದುರಗಡೆ ಇರುವ ಖಾಲಿಜಾಗ, 5ನೇ ಮುಖ್ಯರಸ್ತೆ ಪೋಸ್ಟಲ್ ಕಾಲೋನಿ ಡೆಪೋಡಿಯಲ್ ಸ್ಕೂಲ್ ಹತ್ತಿರ, 12ನೇ ಕ್ರಾಸ್ ಎ.ಇ.ಸಿ.ಎಸ್ ವಂದನಾ ಅಪಾರ್ಟ್‌ಮೆಂಟ್ ಹತ್ತಿರ ಮತ್ತು ಡೆನ್ಜೋ ಎದುರುಗಡೆ ಇರುವ ಖಾಲಿ ಜಾಗಗಳು ಬ್ಲಾಕ್ ಸ್ಪಾಟ್ (ಕಸ ಎಸೆಯುವ ಸ್ಥಳ) ಗಳಾಗುತ್ತಿರುವ ಬಗ್ಗೆ ಸಾರ್ವಜನಿಕರು ತಿಳಿಸಿದರು. ಸದರಿ ವಿಷಯದ ಬಗ್ಗೆ ಗಮನ ಹರಿಸಿ ಬಗೆ ಹರಿಸಬೇಕಾಗಿ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು

**ಬೀದಿ ದೀಪಗಳ ನಿರ್ವಹಣೆ:-**

1. ವಾರ್ಡ್‌ನ ಭೂಪಸಂದ್ರ ನ್ಯೂ ಎಕ್ಸ್‌ಟೆನ್ಷನ್‌ನ ಸುಭಾಷ್ ಶಾಲೆಯ ಎದುರುಗಡೆ ಬೀದಿ ದೀಪಗಳು ಉರಿಯುತ್ತಿಲ್ಲವೆಂದು ಸಾರ್ವಜನಿಕರು ತಿಳಿಸಿದರು.
2. ಬೀದಿ ದೀಪ ನಿರ್ವಾಹಕರು ಟ್ಯೂಬ್‌ಲೈಟ್ ಹೊಂದಿರುವ ದೀಪಗಳನ್ನು ರಿಪೇರಿ ಮಾಡುತ್ತಿಲ್ಲದಿರುವುದಾಗಿ ಸಾರ್ವಜನಿಕರು ತಿಳಿಸಿದರು.
3. ಬೀದಿ ದೀಪಗಳ ನಿರ್ವಹಣೆಗೆ ಸಂಬಂದಿಸಿದಂತೆ ಸಭೆಗೆ ಹಾಜರಾಗುತ್ತಿದ್ದು, ಸಂಬಂಧಪಟ್ಟ ಅಧಿಕಾರಿಗಳು ಸಭೆಗೆ ಹಾಜರಾಗಬೇಕಾಗಿ ಸಾರ್ವಜನಿಕರು ಕೋರಿದರು. ನೋಡಲ್ ಅಧಿಕಾರಿಗಳು ಬೀದಿ ದೀಪಗಳ ನಿರ್ವಹಣೆಯ ಅಧಿಕಾರಿಗಳು ಸಭೆಗೆ ಹಾಜರಾಗಲೂ ತಿಳಿಸುವಂತೆ ವಾರ್ಡ್‌ನ

Scanned with CamScanner

ಸಹಾಯಕ ಅಭಿಯಂತರರಿಗೆ ತಿಳಿಸಿದರು ಹಾಗೂ ಮೇಲಿನ 2 ಸಮಸ್ಯೆಗಳನು ಬಗೆಹರಿಸಲು ತಿಳಿಸುವಂತೆ ಸಹಾಯಕ ಅಭಿಯಂತರರು ಬಿ.ಬಿ.ಎಂ.ಪಿ ರವರಿಗೆ ತಿಳಿಸಿದರು.

**ಬೃಹತ್ ನೀರು ಕಾಲುವೆ:-**

1. ವಾರ್ಡ್‌ನಲ್ಲಿ ಹಾದು ಹೋಗುತ್ತಿರುವ ಬೃಹತ್ ನೀರು ಕಾಲುವೆಗಳಲ್ಲಿ ಕಸ ಕಡ್ಡಿ ತುಂಬಿರುತ್ತದೆ, (ಕೆಲವು ಕಡೆ) ಹುಲ್ಲು ಬೆಳೆದಿರುತ್ತದೆ ಮತ್ತು ಬೃಹತ್ ನೀರು ಕಾಲುವೆಗಳ ಗೋಡೆಗಳು ಕುಸಿದಿರುತ್ತವೆ ಎಂದು ಸಾರ್ವಜನಿಕರು ತಿಳಿಸಿದರು. ಈ ಬಗ್ಗೆ ಗಮನ ಹರಿಸಿ ಬೃಹತ್ ನೀರು ಕಾಲುವೆಗಳನ್ನು ಡಿ ಸಿಲ್ಟ್ ಮಾಡಲು ಮತ್ತು ಕಾಲುವೆ ಗೋಡೆಗಳನ್ನು ಸರಿಪಡಿಸಬೇಕಾಗಿ ಬೃಹತ್ ಮಳೆ ನೀರು ಕಾಲುವೆ ನಿರ್ವಹಣೆ ಮಾಡುವ ಅಧಿಕಾರಿಗಳು ತಿಳಿಸಲು ಬಿ.ಬಿ.ಎಂ.ಪಿ ಸಹಾಯಕ ಅಭಿಯಂತರರಿಗೆ ನೋಡಲ್ ಅಧಿಕಾರಿಗಳು ತಿಳಿಸಿದರು. (ಹಿಂದಿನ ನಡವಳಿಯಿಂದ ಮುಂದುವರೆಸಲಾಗಿದೆ.)

**ಆರೋಗ್ಯ ಇಲಾಖೆ:-**

1. ವಿನಾಯಕ ಬಡಾವಣೆ, ಭೂಪಸಂದ್ರ ಬಡಾವಣೆ, ಎನ್.ಜಿ.ಇ.ಎಫ್ ಬಡಾವಣೆಗಳಲ್ಲಿ ಸೊಳ್ಳೆ ನಿಯಂತ್ರಣ ಔಷಧಿಯನ್ನು ಸಿಂಪಡಿಸಲು ಸಾರ್ವಜನಿಕರು ತಿಳಿಸಿದರು.
2. ರಾಘವೇಂದ್ರ ಮಠದ ಹತ್ತಿರ ಇರುವ ಜಾಗದಲ್ಲಿಯೂ ಸಹ ಸೊಳ್ಳೆ ನಿಯಂತ್ರಣ ಔಷಧಿಯನ್ನು ಸಿಂಪಡಿಸಲು ಸಾರ್ವಜನಿಕರು ತಿಳಿಸಿದರು.

ಹಿರಿಯ ಆರೋಗ್ಯ ಪರಿವೀಕ್ಷಕರಾದ ಸಲ್ಮಾನ್ ರವರು ಮೇಲೆ ತಿಳಿಸಿದ ಸ್ಥಳಗಳಲ್ಲಿ ಸೊಳ್ಳೆ ನಿಯಂತ್ರಣಾ ಔಷದಿಯನ್ನು ಸಿಂಪಡಿಸುವುದಾಗಿ ತಿಳಿಸಿದರು.

**ಕಾಮಗಾರಿ ಇಲಾಖೆ:-**

1. ಸೆಂಟ್ರಲ್ ಎಕ್ಸೈಜ್ ಲೇಔಟ್ ಪಾರ್ಕ್‌ನಲ್ಲಿರುವ ಚರಂಡಿಯ ಮೇಲಿನ ಕವರಿಂಗ್ ಸ್ಲಾಬ್‌ಗಳನ್ನು ಸರಿಪಡಿಸಬೇಕಾಗಿ ಸಾರ್ವಜನಿಕರು ತಿಳಿಸಿದರು.
2. ಎ.ಇ.ಸಿ.ಎಸ್ ಲೇಔಟ್‌ನ 7ನೇ ಕ್ರಾಸ್‌ನಲ್ಲಿ ಹೊಸದಾಗಿ ಸಿ.ಸಿ ಚರಂಡಿ ನಿರ್ಮಾಣ ಮಾಡಿಕೊಡಬೇಕಾಗಿ ಸಾರ್ವಜನಿಕರು ಕೋರಿದರು.

ಮೇಲ್ಕಂಡ ವಿಷಯಗಳ ಬಗ್ಗೆ ಗಮನಹರಿಸಿ ಬಗೆಹರಿಸಬೇಕಾಗಿ ನೋಡಲ್ ಅಧಿಕಾರಿಗಳು ಬಿ.ಬಿ.ಎಂ.ಪಿ ಅಭಿಯಂತರರಿಗೆ ತಿಳಿಸಿದರು.

**ಉದ್ಯಾನವನ:-**

1. ವಾರ್ಡ್‌ನ ವಿವಿಧ ಲೇಔಟ್‌ಗಳಲ್ಲಿ ಬರುವ ಪಾರ್ಕ್‌ಗಳಲ್ಲಿ ಅಳವಡಿಸಿರುವ ಮಕ್ಕಳ ಆಟದ ಸಾಮಾಗ್ರಿಗಳನ್ನು ಮತ್ತು ಜಿಮ್ ಉಪಕರಣಗಳನ್ನು ಸರಿಪಡಿಸಲು ಸಾರ್ವಜನಿಕರು ಕೋರಿದರು

**ಅರಣ್ಯ ಇಲಾಖೆ:-**

1. ಇಲ್ಲಿಯವರೆಗೂ ಯಾವುದೇ ಸಭೆಗೂ ಅರಣ್ಯಾಧಿಕಾರಿಗಳು ಹಾಜರಾಗದಿರುವ ಬಗ್ಗೆ ನೋಡಲ್ ಅಧಿಕಾರಿಗಳು ವಿಷಾದ ವ್ಯಕ್ತ ಪಡಿಸಿದರು. ಮತ್ತು ಸದರಿ ಅಧಿಕಾರಿಗಳಿಗೆ ವಾರ್ಡ್ ಸಭೆಗೆ ಹಾಜರಾಗಲು ಪತ್ರ ಮುಖಾಂತರ ತಿಳಿಸಲು ನೋಡಲ್ ಅಧಿಕಾರಿಗಳು ಸೂಚಿಸಿದರು. (ಹಿಂದಿನ ನಡವಳಿಯಿಂದ ಮುಂದುವರೆಸಲಾಗಿದೆ.)
2. ವಾರ್ಡ್‌ನಲ್ಲಿ ಬರುವ ವಿನಾಯಕ ಲೇಔಟ್, ಆರ್.ಎಂ.ಎಸ್ ಲೇಔಟ್ ಮತ್ತು ಸೆಂಟ್ರಲ್ ಎಕ್ಸೈಜ್ ಲೇಔಟ್‌ನಲ್ಲಿ ಜೋತುಬಿದ್ದಿರುವ ಮರದ ಕೊಂಬೆಗಳನ್ನು ಕತ್ತರಿಸಲು ಅರಣ್ಯಾಧಿಕಾರಿಗಳಿಗೆ ಸೂಚಿಸುವಂತೆ ನೋಡಲ್ ಅಧಿಕಾರಿಗಳು ಬಿ.ಬಿ.ಎಂ.ಪಿ ಅಭಿಯಂತರರಿಗೆ ತಿಳಿಸಿದರು. ಅರಣ್ಯ ಇಲಾಖೆಯ ಅಧಿಕಾರಿಗಳು ಸಭೆಗೆ ಹಾಜರಾಗದಿರುವ ಬಗ್ಗೆ ವಿಷಾದ ವ್ಯಕ್ತ ಪಡಿಸಿ ಮುಂದಿನ ಸಭೆಗೆ ಕಡ್ಡಾಯವಾಗಿ ಹಾಜರಿರುವಂತೆ ಸೂಚಿಸಿದರು. (ಹಿಂದಿನ ನಡವಳಿಯಿಂದ ಮುಂದುವರೆಸಲಾಗಿದೆ.)

**ಬಿ.ಡಬ್ಲ್ಯೂ.ಎಸ್.ಎಸ್.ಬಿ:-**

1. ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳ ಜೊತೆಗೆ ಈಗಾಗಲೇ ದಿನಾಂಕ:- 22-11-2022 ರಂದು ಪ್ರತ್ಯೇಕವಾಗಿ ಸಭೆ ನಡೆಸಿದ್ದು, ವಾರ್ಡ್‌ನ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳ ಪಟ್ಟಿಗಳನ್ನು ಈಗಾಗಲೇ ಸಲ್ಲಿಸಲಾಗಿದ್ದು, ಸದರಿ ವಿಷಯಗಳ ಬಗ್ಗೆ ಗಮನಹರಿಸಿ ಸಮಸ್ಯೆಗಳ ಬಗ್ಗೆ ಗಮನಹರಿಸಿಕೊಡಲು ಸಂಬಂಧಪಟ್ಟ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

Scanned with CamScanner

ಟ್ರಾಫಿಕ್ ಮತ್ತು ಕಾನೂನು ಸುವ್ಯವಸ್ಥೆ:-

1. ಭೂಪಸಂದ್ರ ಬಡಾವಣೆ ಗ್ಯಾಸ್ ರೋಡ್‌ನಲ್ಲಿ ರಾತ್ರಿ 8.30 ರಿಂದ 10.30 ರವರೆಗೆ ಪುಂಡ ಪೋಕರಿಗಳು ಮದ್ಯಪಾನ ಸೇವಿಸಿ ರಸ್ತೆಯಲ್ಲಿ ಓಡಾಡುತ್ತಿರುವ ಹೆಣ್ಣು ಮಕ್ಕಳಿಗೆ ತೊಂದರೆ ಕೊಡುತ್ತಿರುವುದಾಗಿ ಸಾರ್ವಜನಿಕರು ತಿಳಿಸಿದರು.
2. ವಾರ್ಡ್‌ನ ಉಡುಪಿ ಹೋಟೆಲ್ ಪೋಸ್ಟ್ ಆಫೀಸ್ ಕಡೆಗೆ ಹೋಗುವ ರಸ್ತೆಯಲ್ಲಿ ಉಡುಪಿ ಹೋಟೆಲ್‌ನ ಸೆಕ್ಯೂರಿಟಿ ಗಾರ್ಡ್‌ರವರು ವಾಹನ ನಿಲುಗಡೆಯ ನಿರ್ವಹಣೆಯನ್ನು ಸರಿಯಾಗಿ ಮಾಡುತ್ತಿಲ್ಲವೆಂದು ಸಾರ್ವಜನಿಕರು ಕೋರಿದರು.

ಸದರಿ ವಿಷಯಗಳ ಬಗ್ಗೆ ಟ್ರಾಫಿಕ್ ಮತ್ತು ಕಾನೂನು ಸುವ್ಯವಸ್ಥೆಯ ಪೋಲೀಸ್ ಅಧಿಕಾರಿಗಳು ಗಮನಹರಿಸಿ ಕ್ರಮ ಕೈಗೊಳ್ಳಬೇಕಾಗಿ ನೋಡಲ್ ಅಧಿಕಾರಿಗಳು ಸೂಚಿಸಿದರು.

ಬೆಸ್ಕಾಂ:-

1. ವಾರ್ಡ್‌ನಲ್ಲಿ ಬೆಸ್ಕಾಂ ನಿಂದ ಯು.ಜಿ ಕೇಬಲ್ ಅಳವಡಿಸುತ್ತಿರುವ ಕಾಮಗಾರಿ ಮುಕ್ತಾಯ ಹಂತದಲ್ಲಿದ್ದು, ಸದರಿ ಕಾಮಗಾರಿಯಿಂದ ನಿರ್ಮಾಣವಾದ ರಸ್ತೆ ಗುಂಡಿಗಳನ್ನು ಇನ್ನು ಕೆಲವು ಕಡೆ ಮುಚ್ಚಿಲ್ಲದಿರುವ ಬಗ್ಗೆ ಸಾರ್ವಜನಿಕರು ತಿಳಿಸಿದರು ಸದರಿ ವಿಷಯದ ಬಗ್ಗೆ ಗಮನಹರಿಸಿ ಬಾಕಿ ಇರುವ ಗುಂಡಿಗಳನ್ನು ಗುತ್ತಿಗೆದಾರರಿಂದ ಮುಚ್ಚಿಸಬೇಕೆಂದು ಬೆಸ್ಕಾಂ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ತಿಳಿಸಿದರು.

ವಾರ್ಡ್‌ನ ಅಧ್ಯಕ್ಷಕರು ಮಾತನಾಡುತ್ತಾ ಈ ಮೇಲಿನ ಎಲ್ಲಾ ಅಂಶಗಳನ್ನು ಕೂಡಲೇ ಬಗೆಹರಿಸುವಂತೆ ವಾರ್ಡ್ ಕಾರ್ಯದರ್ಶಿಗಳಿಗೆ ತಿಳಿಸುತ್ತಾ ಮತ್ತು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸಾರ್ವಜನಿಕರಿಗೆ ವಂದನೆಗಳನ್ನು ತಿಳಿಸುತ್ತಾ ಈ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ವಾರ್ಡ್ ಸದಸ್ಯ ಕಾರ್ಯದರ್ಶಿಗಳು<br>ಹಾಗೂ ಸಹಾಯಕ ಅಭಿಯಂತರರು<br>ವಾರ್ಡ್-67(ಹಳೆಯ ಸಂಖ್ಯೆ-19),<br>ಸಂಜಯನಗರ | ಅಧ್ಯಕ್ಷರು<br>ಹಾಗೂ ನೋಡಲ್ ಅಧಿಕಾರಿಗಳು<br>ವಾರ್ಡ್-67(ಹಳೆಯ ಸಂಖ್ಯೆ-19),<br>ಸಂಜಯನಗರ |

<u>ಪ್ರತಿಯನ್ನು:-</u>

1. ಮಾನ್ಯ ಜಂಟಿ ಆಯುಕ್ತರು (ಪೂರ್ವ) ಬಿ.ಬಿ.ಎಂ.ಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
3. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
4. ಕಛೇರಿ ಕಡತಕ್ಕೆ

Scanned with CamScanner